-ಡಿ-

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: DCE/BUD/GCC/1/2023-DCE E-1016214

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು ದಿನಾಂಕ:07.03.2023

## ಸುತ್ತೋಲೆ

ವಿಷಯ: ಹಿಂದಿನ ವರ್ಷದ / ವರ್ಷಗಳ ವೇತನ ಬಾಕಿಗಳನ್ನು ಸೆಳೆಯಲು ಸರ್ಕಾರದ ಅನುಮತಿ ನೀಡಿರುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 01 ಟಿಎಫ್‌ಪಿ 2023, ದಿನಾಂಕ:09.02.2023
2.ಸರ್ಕಾರದ ಆದೇಶ ಸಂಖ್ಯೆ: ಆಇ 02 ಬಿ.ಪಿ.ಇ 2023 ಬೆಂಗಳೂರು ದಿನಾಂಕ: 27.02.2023

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (01)ರ ಸರ್ಕಾರದ ಸುತ್ತೋಲೆಯಲ್ಲಿ ಹಿಂದಿನ ವರ್ಷದ / ವರ್ಷಗಳ ವೇತನ ಬಾಕಿಗಳನ್ನು ಸೆಳೆಯಲು ಆರ್ಥಿಕ ಇಲಾಖೆ ಸಹಮತಿ ನೀಡಿದ್ದು, ಅದರಂತೆ ಬಾಕಿ ವೇತನದ ಹೊಣೆಗಾರಿಕೆಯು ಮುಂದಿನ ವರ್ಷಕ್ಕೆ ಮುಂದೂಡುವುದನ್ನು ತಪ್ಪಿಸಲು, ಒಂದು ಬಾರಿ ಕ್ರಮವಾಗಿ 2022-23ನೇ ಸಾಲಿನಲ್ಲಿ ವೇತನಕ್ಕಾಗಿ ಒದಗಿಸಿದ ಅನುದಾನದಲ್ಲಿ ಈ ವರ್ಷದ ವೇತನವನ್ನು ಸೆಳೆಯಲು ಕೊರತೆಯಾಗದಂತೆ ಹಿಂದಿನ ಸಾಲಿನ ವೇತನ ಬಾಕಿಯನ್ನು ಸೆಳೆಯಲು ಅನುದಾನ ಲಭ್ಯವಿದ್ದಲ್ಲಿ ಅಂತಹ ಬಾಕಿ ವೇತನಗಳನ್ನು ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ, ಸೆಳೆಯಲು ತಿಳಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ(02)ರ ಸರ್ಕಾರ ಆದೇಶದಲ್ಲಿ ತಿಳಿಸಿರುವಂತೆ, ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ನಿಗದಿಪಡಿಸಿರುವ ಕಾಲಮಿತಿಯೊಳಗೆ ಸಲ್ಲಿಸಲು ಸೂಚಿಸಲಾಗಿದೆ.

ಅದರಂತೆ ಇಲಾಖಾ ವ್ಯಾಪ್ತಿಯ ಡಿಡಿಓ ಗಳು ಬಾಕಿ ವೇತನವನ್ನು ಸೆಳೆಯಲು ಈ ಕೆಳಕಂಡ ಷರತ್ತುಗಳನ್ವಯ ಹಿಂದಿನ ವರ್ಷದ / ವರ್ಷಗಳ ವೇತನ ಬಾಕಿಗಳನ್ನು ಸೆಳೆಯಲು ಅನುಮತಿ ನೀಡಲಾಗಿದೆ. ಪ್ರಸಕ್ತ ಸಾಲಿನ ಹಾಗೂ ಹಿಂದಿನ ವರ್ಷಗಳ ವೇತನ / ವೇತನ ಬಾಕಿಯನ್ನು ಯಾವುದೇ ಕಾರಣಕ್ಕೂ ಮುಂದಿನ ವರ್ಷಕ್ಕೆ ಮುಂದೂಡದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ವೇತನ ಪಾವತಿಯಾಗದ ಬಗ್ಗೆ ಯಾವುದೇ ದೂರು ಸ್ವೀಕೃತವಾದಲ್ಲಿ ಸಂಬಂದಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

<u>ಷರತ್ತುಗಳು</u>

1) ಕಡ್ಡಾಯವಾಗಿ ಹೆಚ್ ಆರ್ ಎಂ ಎಸ್ ಮತ್ತು ಖಜಾನೆ -2 ತಂತ್ರಾಂಶದ ಮೂಲಕ ಬಿಲ್ ಸಿದ್ದಪಡಿಸಿ ಅನುದಾನ ಸೆಳೆಯುವುದು.
2) ಬೋಧಕರು ತತ್ಸಮಾನ ವೃಂದದವರಿಗೆ ದಿನಾಂಕ 01.01.2006 ರಿಂದ 23.12.2009ರ ಅವಧಿ, 01.01.2016 ರಿಂದ 31.03.2019ರ ಅವಧಿ, ಮತ್ತು ದಿನಾಂಕ 01.04.2019 ರಿಂದ 31.10.2019 / 30.11.2019ರ ಅವಧಿಗೆ ಯಾವುದೇ ಬಾಕಿಯನ್ನು ಪಾವತಿಸುವಂತಿಲ್ಲ.
3) ಸರ್ಕಾರದ ಪತ್ರ ಸಂಖ್ಯೆ: ಇಡಿ 147 ಡಿಸಿಇ 2022 (ಇ) ದಿನಾಂಕ:03.11.2022ರ ಪತ್ರದಲ್ಲಿ ತಿಳಿಸಿರುವಂತೆ ಸರ್ಕಾರದ /ಇಲಾಖೆಯ ಮುಂದಿನ ಆದೇಶ/ ನಿರ್ದೇಶನದವರೆಗೂ CAS ( ಎ.ಜಿ.ಪಿ ಪದೋನ್ನತಿ ಬಾಕಿ) ಆರ್ಥಿಕ ಸೌಲಭ್ಯಗಳನ್ನು ಬೋಧಕರು ತತ್ಸಮಾನ ವೃಂದದವರಿಗೆ ಪಾವತಿಸದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ವ್ಯತಿರಿಕ್ತವಾಗಿ ಅನುದಾನ ಸೆಳೆದಿರುವುದು ಕಂಡುಬಂದಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಂದ ನಷ್ಟದ ಮೊತ್ತವನ್ನು ವಸೂಲಿ ಮಾಡಲಾಗುವುದು ಮತ್ತು ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

---2

4) ಈ ಕಛೇರಿಯ ಸುತ್ತೋಲೆ ಸಂಖ್ಯೆ: DCE/BUD/GEN/17/2022 (E756893) ದಿನಾಂಕ 12.07.2022ರ ಸುತ್ತೋಲೆಯಲ್ಲಿ ತಿಳಿಸಿರುವಂತೆ 2021-22ನೇ ಸಾಲಿನ ವೇತನ ಬಾಕಿ ಮತ್ತು ಇತರೆ ಬಾಕಿಗಳ ಪಾವತಿಗೆ ಪಿ.ಡಿ ಖಾತೆ ಮೂಲಕ ಅನುದಾನ ಬಿಡುಗಡೆ ಮಾಡಲಾಗಿದೆ. ಸದರಿ ಬೋಧಕರು ಮತ್ತು ಬೋಧಕೇತರರಿಗೆ ಈಗಾಗಲೇ ಬಿಡುಗಡೆ ಮಾಡಿರುವ ಅವಧಿಗೆ ಯಾವುದೇ ಹಿಂಬಾಕಿಯನ್ನು ಮತ್ತೊಮ್ಮೆ ಸೆಳೆಯದಂತೆ ಸೂಚಿಸಲಾಗಿದೆ. ಹಾಗೂ ಮ್ಯಾನ್ಯುಯಲ್ ಆಗಿ ಪಡೆದಿರುವ ಬಾಕಿಯ ವಿವರಗಳನ್ನು ಕೇಂದ್ರ ಕಛೇರಿಯ HRMS ವಿಭಾಗವನ್ನು ಸಂಪರ್ಕಿಸಿ HRMS ನಲ್ಲಿ DRAFT BILL APPROVE ಮಾಡಿಸಿಕೊಳ್ಳುವುದಕ್ಕೆ ಅಗತ್ಯ ಕ್ರಮ ವಹಿಸುವುದು.

ಅಡಕ: ಉಲ್ಲೇಖಿತ ಸರ್ಕಾರದ ಆದೇಶ ಮತ್ತು ಸುತ್ತೋಲೆ

S.B. [signature]

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ,

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ, ಜಂಟಿ ನಿರ್ದೇಶಕರುಗಳು / ಸರ್ಕಾರಿ ಪ್ರಥಮ ದರ್ಜೆ ಪ್ರಾಂಶುಪಾಲರುಗಳು /ಸರ್ಕಾರಿ ಸಂಸ್ಕೃತ ಕಾಲೇಜುಗಳ ಪ್ರಾಂಶುಪಾಲರುಗಳು

ಪ್ರತಿಯನ್ನು:

1. ಲೆಕ್ಕಾಧಿಕಾರಿಗಳು, ಹಣಪಾವತಿ ವಿಭಾಗ, ಕಾಶಿಇ, ಕೇಂದ್ರಕಛೇರಿ ಬೆಂಗಳೂರು- ಅಗತ್ಯ ಕ್ರಮಕ್ಕಾಗಿ
2. ಮಾಹಿತಿ & ತಂತ್ರಜ್ಞಾನ ಅಧಿಕಾರಿಗಳು , ಮಾಹಿತಿ & ತಂತ್ರಜ್ಞಾನ ವಿಭಾಗ , ಕಾಶಿಇ, ಕೇಂದ್ರಕಛೇರಿ ಬೆಂಗಳೂರು- ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ

I/3647/2023

# ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 01 ಟಿಎಫ್‌ಪಿ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:09-02-2023

## ಸುತ್ತೋಲೆ

**ವಿಷಯ**:- ಹಿಂದಿನ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಬಗ್ಗೆ

********

ಸುತ್ತೋಲೆ ಸಂಖ್ಯೆ:ಆಇ 1 ಟಿಎಫ್‌ಪಿ 2021 ದಿ:3.8.2021ರಲ್ಲಿ ಎಲ್ಲಾ ಇಲಾಖೆಗಳು ವೇತನಕ್ಕೆ ಸಂಬಂಧಿಸಿದಂತೆ ಬಾಕಿಗಳನ್ನು ಸೆಳೆಯಬೇಕಾದಲ್ಲಿ ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆಯತಕ್ಕದ್ದೆಂದು ತಿಳಿಸಲಾಗಿದೆ.

ಆದರೆ, ಬಾಕಿ ವೇತನದ ಹೊಣೆಗಾರಿಕೆಯು ಮುಂದಿನ ವರ್ಷಕ್ಕೆ ಮುಂದೂಡುವುದನ್ನು ತಪ್ಪಿಸಲು, ಒಂದು ಬಾರಿ ಕ್ರಮವಾಗಿ 2022-23ನೇ ಸಾಲಿನಲ್ಲಿ ವೇತನಕ್ಕಾಗಿ ಒದಗಿಸಿದ ಅನುದಾನದಲ್ಲಿ ಈ ವರ್ಷದ ವೇತನವನ್ನು ಸೆಳೆಯಲು ಕೊರತೆಯಾಗದಂತೆ ಹಿಂದಿನ ಸಾಲಿನ ವೇತನ ಬಾಕಿಯನ್ನು ಸೆಳೆಯಲು ಅನುದಾನ ಲಭ್ಯವಿದ್ದಲ್ಲಿ ಅಂತಹ ಬಾಕಿ ವೇತನಗಳನ್ನು ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ, ಸೆಳೆಯಲು ತಿಳಿಸಲಾಗಿದೆ.

ಸಂಬಂಧಪಟ್ಟ ಖಜಾನೆಗಳು ಇಂತಹ ಬಿಲ್ಲುಗಳನ್ನು ಅಂಗೀಕರಿಸುವಂತೆ ತಿಳಿಸಲಾಗಿದೆ.

Signed by Shobha Ha
Date: 09-02-2023 21:22:35
(ಹೆಚ್.ಎ. ಶೋಭ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಎಫ್‌ಆರ್ & ಬಿಸಿಸಿ)

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು.(ಎ&ಇ)/ ಪ್ರಧಾನ ಮಹಾಲೇಖಪಾಲರು(ಸಿ&ಸಿಎ)./ ಮಹಾಲೇಖಪಾಲರು (ಆಡಿಟ್-I & II),ಬೆಂಗಳೂರು.
2. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-560 001.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ಆರ್ಥಿಕ ಇಲಾಖೆಯ ಅಪರ/ಜಂಟಿ/ಉಪ ಕಾರ್ಯದರ್ಶಿಗಳು
7. ಶಾಖಾ ರಕ್ಷಾ ಕಡತ

ಈ ಸುತ್ತೋಲೆಯನ್ನು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲ ತಾಣ www.finance.karnataka.gov.in ನಲ್ಲಿ ವೀಕ್ಷಿಸಿ

## ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ: ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಆಇ 30 ಬಿಪಿಇ 2021, ದಿನಾಂಕ:28.12.2021.
2. ಆಯುಕ್ತರು, ಖಜಾನೆ ಇಲಾಖೆ ಇವರ e-office ಕಡತ ಸಂಖ್ಯೆ: DOT/PRO /CLAR/23/2022-PRO-DIRECTORATE OF TREASURIES (956375).
3. ಸರ್ಕಾರದ ಆದೇಶ ಸಂಖ್ಯೆ:ಆಇ 02 ಬಿಪಿಇ 2023 ದಿನಾಂಕ:10.01.2023
4. ಆಇ 01 ಟಿಎಫ್ ಪಿ 2023 ದಿನಾಂಕ:09.02.2023
5. ಆಯುಕ್ತರು, ಖಜಾನೆ ಇಲಾಖೆ ಇವರ e-office ಕಡತ ಸಂಖ್ಯೆ: DOT/PRO /MIS/3/2020-PRO-DIRECTORATE OF TREASURIES (337321).

* * * * *

ಪ್ರಸ್ತಾವನೆ:-

2021-22ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ:31.03.2022 ರಂದೇ 2021-22 ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖ (1)ರ ಸರ್ಕಾರಿ ಆದೇಶ ಮತ್ತು ತದನಂತರದ ಆದೇಶಗಳಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು.

2022-23 ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಸಹ ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ:31.03.2023 ರಂದೇ 2022-23 ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಸೂಕ್ತ ವೇಳಾಪಟ್ಟಿಯನ್ನು ನೀಡಿ ಸಾಕಷ್ಟು ಮುಂಚಿತವಾಗಿ ಆದೇಶವನ್ನು ಹೊರಡಿಸುವುದು ಅವಶ್ಯವಿದೆಯೆಂದು ಖಜಾನೆ ಆಯುಕ್ತರು ಮೇಲೆ ಉಲ್ಲೇಖ(2)ರಲ್ಲಿ ಓದಲಾದ ಕಡತದಲ್ಲಿ ಸರ್ಕಾರವನ್ನು ಕೋರಲಾಗಿ ಉಲ್ಲೇಖ(3) ರಲ್ಲಿ ಆದೇಶ ಹೊರಡಿಸಲಾಗಿದೆ.

ಖಜಾನೆ ಆಯುಕ್ತರು ಮತ್ತು ಇಲಾಖೆಗಳ ಕೋರಿಕೆ ಮೇರೆಗೆ ಈ ಕೆಳಗಿನಂತೆ ವಿಸ್ತರಿಸಿ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 02 ಬಿಪಿಇ 2023 ಬೆಂಗಳೂರು, ದಿನಾಂಕ: 27.02.2023**

**ಈ ಕೆಳಕಂಡ ವೆಚ್ಚಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ:ಆಇ 02 ಬಿಪಿಇ 2023 ದಿ:10.01.2023 ರಲ್ಲಿ ನಿಗಧಿಪಡಿಸಿರುವ ದಿನಾಂಕವನ್ನು ಈ ಕೆಳಗಿನಂತೆ ವಿಸ್ತರಿಸಿ ಆದೇಶಿಸಿದೆ.**

| ಕ್ರಮ ಸಂ | ಬಿಲ್ಲುಗಳ ಸ್ವರೂಪ / ವಿವರಗಳು | 31.12.2022 ರವರೆಗೆ ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ | ವಿಸ್ತರಿಸಲಾದ ದಿನಾಂಕ |
|---|---|---|---|
| 01 | ವೇತನ/ವೇತನ ಬಾಕಿ ಬಿಲ್ಲುಗಳು/ಹಬ್ಬದ ಮುಂಗಡ ಬಿಲ್ಲುಗಳು/ಅನುದಾನಿತ ವೇತನ ಬಿಲ್ಲುಗಳು/ಇತರ ಅನುದಾನಿತ ಬಿಲ್ಲುಗಳು | 10.02.2023 | 06.03.2023 |

| | | | |
|---|---|---|---|
| 02 | ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಪ್ರಯಾಣ ಭತ್ಯೆ, ವೈದ್ಯಕೀಯ ಭತ್ಯೆ ಮತ್ತು ಇತರ ಸಾದಿಲ್ವಾರು ಬಿಲ್ಲುಗಳು | 15.02.2023 | 06.03.2023 |
| 03 | EAP ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅನುದಾನ ಬಿಡುಗಡೆಯ ಬಿಲ್ಲುಗಳು | 15.02.2023 | 06.03.2023 |
| 04 | ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು | 16.02.2023 | 06.03.2023 |
| 05 | ಆರ್ಥಿಕ ಇಲಾಖೆಯಿಂದ ದಿ:31.01.2023 ಕ್ಕಿಂತ ಮೊದಲು ಹೊರಡಿಸಲಾಗುವ ಪುನರ್ವಿನಿಯೋಗದ ಮತ್ತು ಹೆಚ್ಚುವರಿ ಅನುದಾನದ ಬಿಲ್ಲುಗಳು | 06.03.2023 | |

ಮೇಲ್ಕಂಡ ಬಿಲ್ಲುಗಳನ್ನು ಹೊರತುಪಡಿಸಿ ಉಳಿದ ಬಿಲ್ಲುಗಳನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ:ಆಇ 02 ಬಿಪಿಇ 2023 ಬೆಂಗಳೂರು, ದಿ:10.01.2023 ರಲ್ಲಿ ನಿಗದಿಗೊಳಿಸಲಾಗಿದ್ದ ಕಾಲಮಿತಿಯು ಮುಂದುವರೆಯುತ್ತದೆ.

**ಈ ಆದೇಶವನ್ನು ಆರ್ಥಿಕ ಇಲಾಖೆಯ ವೆಬ್ ಸೈಟ್ www.finance.karnataka.gov.in ನಿಂದ ಪಡೆಯಬಹುದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/2/2023.
(ಹೆಚ್. ಎ. ಶೋಭ)
ಸರ್ಕಾರದ ಜಂಟಿ ಕಾರ್ಯದರ್ಶಿ (ಎಫ್.ಆರ್.& ಬಿ.ಸಿ.ಸಿ)
ಆರ್ಥಿಕ ಇಲಾಖೆ

ಇವರಿಗೆ:-

1)ಪ್ರಧಾನ ಮಹಾಲೇಖಪಾಲರು (A&E)/(Audit-I)/( Audit-II), ಕರ್ನಾಟಕ, ಬೆಂಗಳೂರು.

2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

5) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.

8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

9) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009.

10)ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

11) ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರು.

12) ಯೋಜನಾ ನಿರ್ದೇಶಕರು, HRMS-2.

13) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

14) ಎಲ್ಲಾ ಇಲಾಖಾ ಮುಖ್ಯಸ್ಥರು.

15) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.